give him the benefits that a physically handicapped man is eligible?

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಇದು ಬಹಳ ಸಂಕೀರ್ಣವಾದಂತ ಪ್ರಶ್ನೆಯಾಗಿದೆ. ಆತ ಮುಂದೆ ಸೇವಾ ನಿಯಮಾವಳಿಗಳ ನುಸಾರವಾಗಿ ಸೇರಿದಂಥ ಸಂದರ್ಭದ ನಂತರ ಅಪಘಾತಗಳಿಂದಲೋ ಅಥವಾ ಅನ್ಯ ಕಾರಣಗಳಿಂದ ಆತನಿಗೆ ಅಂಗವಿಕಲತ್ವ, ಊನತ್ವ ಬಂದರೆ ಅಂಥವುಗಳು ಈ ಕ್ಯಾಟಗರಿಯೊಳಗೆ ಬರುವುದಿಲ್ಲ. ಮಾಮೂಲಿಯಾಗಿ ಸಿಗತಕ್ಕಂಥ ಬಡ್ತಿಗಳು.

Mr. SPEAKER : But practically he is physically handicapped.

Sri M.P. PRAKASH : Practically he is a handicapped person invoking the provision under that reservation. He had joined the service under other category. Therefore, he cannot be transferred to the other category of the handicapped reservation. But here in this case, because of the Indira Sahni's case decided by the Supreme court, the Government of India has thought it fit of bringing an amendment to the Constitution, adding another proviso to the Article 16(4)(c). Therefore, there is no provision as such to give them the promotion in the reservation.

Mr. SPEAKER : But I would suggest to the begain Government to ponder over this proposition which I have placed before you.

ಶ್ರೀ ಎಂ.ಪಿ. ಪ್ರಕಾಶ್ : ಸರ್ಟನ್ಲಿ, ಅಧ್ಯಕ್ಷರೇ ನೀವು ಕೊಟ್ಟಿರುವುದು ಒಳ್ಳೆಯ ಸಲಹೆಯಾಗಿರುವುದರಿಂದ ಅದನ್ನು ಖಂಡಿತವಾಗಿಯೂ ಪರಿಗಣಿಸುತ್ತೇವೆ.

ಬೆಂಗಳೂರಿನ ಜಯನಗರ ಕ್ರೀಡಾಂಗಣ ಅಭಿವೃದ್ಧಿ

150 - ಶ್ರೀ ರಾಮಲಿಂಗಾ ರೆಡ್ಡಿ (ಜಯನಗರ) : ಮಾನ್ಯ ಬೆಂಗಳೂರು ಅಭಿವೃದ್ಧಿ ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಜಯನಗರ ಕ್ರೀಡಾಂಗಣವನ್ನು ಅಭಿವೃದ್ಧಿಗೊಳಿಸಲು 1995-96ನೇ ಸಾಲಿನಲ್ಲಿ ಸರ್ಕಾರ ಇಲ್ಲಿಯವರೆಗೆ ಏನು ಮಾಡಿರುವ ಹಣವೆಷ್ಟು?

ಆ) 1996ರ ಮಾರ್ಚಿಯೊಳಗೆ ಈ ಕೆಲಸಕ್ಕಾಗಿ ಎಷ್ಟು ಹಣವನ್ನು ವೆಚ್ಚ ಮಾಡಲು ಸರ್ಕಾರದವರು ಉದ್ದೇಶಿಸಿರುವರು?

ಶ್ರೀ ಆರ್. ರೋಷನ್ ಬೇಗ್ (ಬೆಂಗಳೂರು ಅಭಿವೃದ್ಧಿ ಮತ್ತು ವಕ್ಫ್ ರಾಜ್ಯ ಸಚಿವರು) :

ಅ) ಬೆಂಗಳೂರು ನಗರದ ಜಯನಗರ ಕ್ರೀಡಾಂಗಣವನ್ನು ಅಭಿವೃದ್ಧಿಗೊಳಿಸಲು 1995-96ನೇ ಸಾಲಿನ ಕಾರ್ಯಕ್ರಮ ಪಟ್ಟಿಯಲ್ಲಿ ಸೇರಿರುವುದಿಲ್ಲ.

ಆ) ಜಯನಗರ ಕ್ರೀಡಾಂಗಣದ ಅಭಿವೃದ್ಧಿಗಾಗಿ 1996ನೇ ಮಾರ್ಚ್‌ಯೊಳಗೆ ಯಾವುದೇ ಹಣವನ್ನು ವಿಚ್ಛೆ ಮಾಡುವ ನಿರೀಕ್ಷೆ ಇರುವುದಿಲ್ಲ.

ಶ್ರೀ ರಾಮಲಿಂಗರೆಡ್ಡಿ : ಮಾನ್ಯ ಅಧ್ಯಕ್ಷರೇ, ಉತ್ತರವನ್ನೇನೋ ಓದಿಸಿದ್ದಾರೆ, ಅದರಲ್ಲಿ ನಮ್ಮ ಬೆಂಗಳೂರು ನಗರದಲ್ಲಿದ್ದ ಕಂಠೀರವ ಸ್ಟೇಡಿಯಮನ್ನು ಒಡೆದು ಹಾಕಿದ್ದಾರೆ. ಈ ಸ್ಟೇಡಿಯಮ ಒಂದನ್ನು ಬಿಟ್ಟರೆ ಬೆಂಗಳೂರಿನಲ್ಲಿ ಇರುವ ಮತ್ತೊಂದು ಮೊಡ್ಡ ಸ್ಟೇಡಿಯಮ್ ಎಂದರೆ ಜಯನಗರದಲ್ಲಿರತಕ್ಕಂಥ ಸ್ಟೇಡಿಯಮ್. ಅಲ್ಲಿ ಪ್ರತಿ ದಿನ ಸಾವಿರಾರು ಜನರು, ಮಕ್ಕಳುಗಳು ಬಂದು ಆಟವಾಡುತ್ತಾರೆ. ಅಲ್ಲಿ ಬೇಕಾದಷ್ಟು ಕೆಲಸಗಳಾಗಬೇಕಾದ ಅವಶ್ಯಕತೆ ಇದೆ, ಅಲ್ಲಿ ಟ್ರಾಕ್ ಹಾಳಾಗಿದೆ, ಸುಮಾರು ಒಂದು ವರ್ಷದಿಂದ ಬಾತ್ ರೂಂ ಕೂಡ ರಿಪೇರಿಯಾಗಿಲ್ಲ. ಹಿಂದೆ ಮುಖ್ಯಮಂತ್ರಿಗಳು ಅಲ್ಲಿ ಯಾವುದೇ ಒಂದು ಸಮಾರಂಭಕ್ಕೆ ಬಂದಿದ್ದಾಗ ಅಧಿಕಾರಿಗಳಿಗೆ, ಆಗಬೇಕಾದ ಕೆಲಸಗಳನ್ನು ಮಾಡಿಸಲು ಸೂಚನೆಯನ್ನು ಕೊಟ್ಟಿದ್ದರು. ಆದರೆ ಈ ವರ್ಷದಲ್ಲಿ 96-97ರಲ್ಲಿ ಏನೂ ಕೆಲಸಗಳನ್ನು ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದ್ದಾರೆ. ಇಲ್ಲಿ ಬೇಕಾದಷ್ಟು ಕೆಲಸಗಳು ಆಗಬೇಕಾಗಿದೆ. ಮತ್ತೆ ಜಯನಗರದಲ್ಲಿರುವ ಸ್ವಿಮಿಂಗ್ ಪೂಲ್ ರಿಪೇರಿ ಕೆಲಸವನ್ನು ಈಗಾಗಲೇ ಒಂದೂವರೆ ವರ್ಷದ ಹಿಂದೆ ತೆಗೆದುಕೊಂಡಿದ್ದು ಇದುವರೆಗೂ ಕೂಡ ಅದು ಪೂರ್ಣವಾಗಿಲ್ಲ. ಈ ಎರಡೂ ಕೆಲಸಗಳನ್ನು ಆದಷ್ಟು ಬೇಗ ಮಾಡಿಕೊಡಿಸಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ರೋಷನ್ ಬೇಗ್ : ಮಾನ್ಯ ಅಧ್ಯಕ್ಷರೇ, ಸುಮಾರು 20 ವರ್ಷಗಳಿಂದ ಜಯನಗರದಲ್ಲಿ ಒಂದು ಸ್ಟೇಡಿಯಮ್ ಇದೆ. ಆ ಸ್ಟೇಡಿಯಮನಲ್ಲಿ ಅಥ್ಲೆಟಿಕ್ ಟ್ರಾಕ್, ಸ್ಕೇಟಿಂಗ್ ರೌಂಡ್, ಬ್ಯಾಸ್ಕೆಟ್ ಬಾಲ್, ಬ್ಯಾಡ್ಮಿಂಟನ್, ಈ ಸ್ಪೋರ್ಟ್ಸಗಳ್ಲಾ ಸೌಲಭ್ಯಗಳು ಇವೆ. ಈಗ ಮಾನ್ಯ ಸದಸ್ಯರು ಮಾತನಾಡುತ್ತ ಅಲ್ಲಿರತಕ್ಕಂಥ ಸ್ವಿಮಿಂಗ್ ಪೂಲ್ ಮತ್ತು ಬಾತ್ ರೂಂಗಳಲ್ಲಿ ಸರಿಯಾಗಿ ರಿಪೇರಿ ಪೂರ್ಣವಾಗಿಲ್ಲ ಎಂದು ಹೇಳಿದ್ದಾರೆ. ಆದಕಾರಣ ನಾನೇ ಸ್ವತಃ ಅವರನ್ನು ಕರೆದುಕೊಂಡು ಹೋಗಿ ಅಲ್ಲಿ ಪರಿಶೀಲನೆ ಮಾಡಿ ಅಲ್ಲಿ ಏನು ಕೆಲಸಗಳಾಗಬೇಕಿದೆ ಅದನ್ನು ಮಾಡಿಸಿಕೊಡುತ್ತೇನೆ.

ಫಟಪ್ರಭಾ ಬಲದಂಡೆ ಕಾಲುವೆ ಪ್ರಗತಿ

136 - ಶ್ರೀ ಚಂದ್ರಶೇಖರ ನಾಯಕ್ (ಗೋಕಾಕ್) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಘಟಪ್ರಭಾ ಬಲದಂಡೆ ಕಾಲುವೆಯ ಉದ್ದಳತೆ ಎಷ್ಟು ?

ಆ) ಈವರೆಗೆ ಪೂರ್ತಿಯಾದ ಕಾಲುವೆಯ ಉದ್ದಳತೆ ಎಷ್ಟು ? ಯಾವ ಯಾವ ಸ್ಥಳದಲ್ಲಿ ಕಿ.ಮೀ. ವಿವರ ಕೊಡುವುದು